ಓ ಎಸ್ 137/2019
ಡಿಡಬ್ಲ್ಯೂ 1

<u>ದಿನಾಂಕಃ 20-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-</u>**

ವಾದಿಗಳು ನನ್ನ ಸಹೋದರಿಯರು ಇರುತ್ತಾರೆ. ಆಸ್ತಿ ಪಾಲು ಕೇಳಿ ಅವರು ಈ ದಾವೆಯನ್ನು ಹಾಕಿದ್ದಾರೆ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಕೂಡಾ ನಮ್ಮ ಜೊತೆ ಸಮನಾದ ಹಿಸ್ಸೆ ಇದೆ ಎಂದರೆ ಸರಿ. ಎರಡನೇ ಪ್ರತಿವಾದಿಯ ಪರಿಚಯ ಇದೆ. 1980 ರಲ್ಲಿ ಆಗಿದೆ ಎನ್ನಲಾಗುವ ಕ್ರಯ ಪತ್ರ ಮಾಡುವಾಗ ಒಂದನೇ ವಾದಿ ತಮ್ಮ ಗಂಡನ ಮನೆಯಲ್ಲಿ ಇದ್ದರು. ಸದರಿ ಕ್ರಯ ಪತ್ರದ ಬಗ್ಗೆ ಒಂದನೇ ವಾದಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಅವರಿಗೆ ಕ್ರಯ ಪತ್ರ ಆಗಿರುವ ಬಗ್ಗೆ ಮಾಹಿತಿ ಇತ್ತೀಚೆಗೆ ಗೊತ್ತಾಗಿದೆ ಎಂದರೆ ಸರಿ. ವಾದಿಗಳ ಗಮನಕ್ಕೆ ಬಾರದ ಹಾಗೆ ಖರೀದಿ ಪತ್ರವನ್ನು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಮಾಡಿಕೊಡಲಾಗಿದೆ ಎಂದರೆ ಸರಿಯಲ್ಲ. ಅವರಿಗೂ ಕೂಡಾ ಆಸ್ತಿಯಲ್ಲಿ ಪಾಲು ಇದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ವಕೀಲರಿಂದಃ-</u>**

ನಾನು ಎಂಟನೇ ತರಗತಿಯವರೆಗೆ ಓದಿದ್ದೇನೆ. ದಾವಾ ಆಸ್ತಿಯನ್ನು ನಾನು, ನನ್ನ ತಾಯಿ ಮತ್ತು ನನ್ನ ತಂದೆಯ ಮೊದಲ ಹೆಂಡತಿ ದೇವಮ್ಮ ಎಲ್ಲರೂ ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ, ಗುತ್ತಿಗೆ ತಿರುವಳಿ ಪತ್ರ ಮಾಡಿಕೊಟ್ಟಿದ್ದೇವೆ. ಸದರಿ ತಿರುವಳಿ ಪತ್ರ ವನ್ನು 1989 ರಲ್ಲಿ ಮಾಡಿಕೊಡಲಾಗಿದೆ. ಸದರಿ ಪತ್ರ ಆಗುವಾಗ ನಾನು ಕೂಡಾ ಇದ್ದೆ ಆದರೆ ನಾನು ಅಲ್ಪವಯಿ ಇದ್ದೆ. ಖರೀದಿ ಪತ್ರದಲ್ಲಿ ನಾನು ಅಲ್ಪವಯಿ ಇದ್ದ ಬಗ್ಗೆ ನಮೂದು ಮಾಡಿಲ್ಲ. 1990 ನೇ ಸಾಲಿನಲ್ಲಿ ವರ್ಗಾವಣೆ ಆದೇಶ ಆಗಿ ಎರಡನೇ ಪ್ರತಿವಾದಿ ಹೆಸರಿಗೆ ಪಹಣಿಗಳು ಬಂದಿವೆ ಎಂದರೆ ಸರಿ. ನಾನು ದಾಖಲೆಗಳನ್ನು ಸರಿಯಾಗಿ ನೋಡಿಕೊಂಡಿರಲಿಲ್ಲ. ಖರೀದಿ ಪತ್ರ ಆಗಿರಲಿಲ್ಲ, ಗುತ್ತಿಗೆ ಪತ್ರ ಮಾತ್ರ ಆಗಿದೆ ಎಂಬ ವಿಷಯ ನನಗೆ ನನ್ನ ಅಕ್ಕ ದಾವಾ ಹಾಕಿದ ಮೇಲೆ ಗೊತ್ತಾಗಿದೆ. ಈ ವಿಷಯನ್ನು ನನ್ನ ಪ್ರಮಾಣ ಪತ್ರದಲ್ಲಿ ಅಥವಾ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಎರಡನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿರುವುದನ್ನು ಪ್ರಶ್ನೆ ಮಾಡಿ ನಾನು ಯಾವುದೇ ಕಂದಾಯ ಅಪೀಲು ವಗೈರೆ ಸಲ್ಲಿಸಿರುವುದಿಲ್ಲ.

ನಾನು, ನನ್ನ ತಾಯಿಯಂದಿರು ಮತ್ತು ಅಕ್ಕ ತಂಗಿಯರು ಮೂಲ ದಾವೆ 16/2003 ರಂತೆ ಪಾಲು ವಿಭಾಗ ಕೋರಿ ದಾವೆ ಹಾಕಿದ್ದೆವು ಮತ್ತು ಅದು ಡಿಕ್ರಿ ಆಗಿತ್ತು ಎಂದರೆ ಸರಿ. ಎಫ್ ಡಿ ಪಿ ಅರ್ಜಿ ಸಂಖ್ಯೆ 15/2013 ರಂತೆ ದಾಖಲಿಸಿ ಸ್ವಾಧೀನ ಕೂಡಾ ಪಡೆದುಕೊಂಡಿದ್ದೆವು ಎಂದರೆ ಸರಿ. ಚಿಕ್ಕಮಗಳೂರು ಜಿಲ್ಲಾ ನ್ಯಾಯಾಲಯದಲ್ಲಿ ಹಾಕಿದ್ದ ಅಪೀಲು ಸಂಖ್ಯೆ 52/2011

ವಜಾ ಆಯಿತು ಎಂದರೆ ಸರಿ. ಮೂಲ ದಾವೆ 16/2003 ರಲ್ಲಿ ಇದ್ದ ಪಕ್ಷಗಾರರ ಬಗ್ಗೆ ನನಗೆ ಮಾಹಿತಿ ಇದೆ. ಅದರಲ್ಲಿದ್ದ ಪಕ್ಷಗಾರರ ಪೈಕಿ ದೇವಮ್ಮ, ನಂಜಮ್ಮ ಕಾವೇರಮ್ಮ ಇವರುಗಳು ಈ ದಾವೆಯಲ್ಲಿ ಪಕ್ಷಗಾರರು ಆಗಿಲ್ಲ ಎಂದರೆ ಸರಿ. ನನ್ನ ತಂದೆಯ ಮೊದಲ ಹೆಂಡತಿ ದೇವಮ್ಮ ಈಕೆಯ ಮಗಳು ಕಾವೇರಮ್ಮ ಈ ಪ್ರಕರಣದಲ್ಲಿ ಪಕ್ಷಗಾರರು ಇಲ್ಲ ಎಂದರೆ ಸರಿ. ಅವರು ಕೂಡಾ ನಮ್ಮ ಊರಿನಲ್ಲಿಯೇ ಇದ್ದಾರೆ. 1989 ನೇ ಸಾಲಿನಲ್ಲಿ ಪತ್ರ ನೋಂದಣಿ ಆದ ನಂತರದಲ್ಲಿ ಎರಡನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಅವರು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಸರಿ. ನಾನು ವಾದಿಗಳೊಂದಿಗೆ ಸೇರಿಕೊಂಡು ಪಿತೂರಿ ಮಾಡಿ ಎರಡನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಡಾ ವಾದಿಗಳೊಂದಿಗೆ ಶಾಮಿಲಾಗಿ ದಾವೆ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ನ್ಯಾಯಾಲಯದ ಮುಖಾಂತ ಭಾಗ ಆಗಿ ನಮಗೆ ಬರಬೇಕಾಗಿದ್ದ ಆಸ್ತಿಗಳಲ್ಲಿ ಭಾಗ ಬಂದಿರುವ ಕಾರಣ ಈ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ನನಗಾಗಲಿ ವಾದಿಗಳಿಗಾಗಲಿ ದಾವಾ ಆಸ್ತಿಯಲ್ಲಿ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***